ತೆಗೆದುಕೊಳ್ಳಲು ನಿರ್ಧರಿಸಿ ಎದ್ದೆ. "ಊಟದ ನಂತರ ಒಂದೂ ಒಂದೂವರೆ ಗಂಟೆ ನಿದ್ದೆ ಮಾಡುವುದು ಅಭ್ಯಾಸವಾಗಿಬಿಟ್ಟಿದೆ..." ಎಂದು ಹೇಳಿದ್ದರು ಚರ್ಲಪಲ್ಲಿ ನರಸಿಂಹರೆಡ್ಡಿ.

ವೈನ್ ಕುಡಿದು ಬಿರಿಯಾನಿ ತಿಂದಿದ್ದರಿಂದ ನಾನೂ ಒಂದು ಗಂಟೆ ನಿದ್ದೆಯಲ್ಲಿ ಮುಳುಗಿ ಬಿಟ್ಟಿದ್ದೆ. ಎಚ್ಚರವಾದಾಗ ಐದೂವರೆ ಗಂಟೆಯಾಗಿತ್ತು. ಇಂಟರ್‌ಕಾಮ್‌ನಲ್ಲಿ ಚಹಾಗೆ ಆರ್ಡರ್ ಮಾಡಿ ಫ್ರೆಶ್ ಆಗಿ ಸೋಫಾದ ಮೇಲೆ ಕುಳಿತು ಟೀವಿ ಆನ್ ಮಾಡಿದ್ದೆ. ದೂರದ ಇಂಡೋನೇಷ್ಯಾದಲ್ಲಿ ಸುನಾಮಿಯ ರುದ್ರ ನರ್ತನ ನೂರಾರು ಜನರನ್ನು ಬಲಿ ತೆಗೆದುಕೊಂಡಿತ್ತು. ಮನುಷ್ಯ ತನ್ನ ಬುದ್ಧಿವಂತಿಕೆಯಿಂದ ಎಷ್ಟು ಮರೆದಾಡಿದರೂ ಪ್ರಕೃತಿ ಒಂದು ನಿಮಿಷ ಮುನಿಸಿಕೊಂಡರೂ ಸೊನ್ನೆಯಾಗಿಬಿಡುತ್ತಾನೆ. ನಾನು ನಿನ್ನೆಯೇ ಹೈದರಾಬಾದಿಗೆ ಬರುತ್ತಿರುವುದರ ಬಗ್ಗೆ ಕೃಷ್ಣ ಮನೋಹರನಿಗೆ ಹೇಳಿದ್ದೆ. ಚಂಚಲಗೂಡ ಜೈಲಿನ ಪೊಲೀಸ್ ಗೆಸ್ಟ್‌ಹೌಸ್‌ನಲ್ಲಿ ಉಳಿದುಕೊಳ್ಳಲು ಹೇಳಿದ್ದವನಿಗೆ ಬೇರೆ ಅರೆಂಜ್ಮೆಂಟ್ ಇರುವುದಾಗಿಯೂ, ಸಾಧ್ಯವಾದರೆ ಭೇಟಿಯಾಗುವುದಾಗಿಯೂ ತಿಳಿಸಿದ್ದೆ. ಕೃಷ್ಣ ಮನೋಹರ ನನ್ನ ಎಂ.ಎ. ಕ್ಲಾಸ್‌ಮೇಟ್ ಆಗಿದ್ದು ಓದುವಾಗ ಅವನಿಗೆ ತುಂಬಾ ಸಹಾಯ ಮಾಡಿದ್ದೆನಲ್ಲದೆ ಅವನು ಯುಪಿಎಸ್ ಪರೀಕ್ಷೆ ತೆಗೆದುಕೊಂಡಾಗ ಎರಡು ವರ್ಷಗಳ ಕಾಲ ಬೆಂಗಳೂರಿನ ನಮ್ಮ ಮನೆಯ ಮಹಡಿಯ ಮೇಲಿನ ಸಿಂಗಲ್ ಬೆಡ್‌ರೂಮ್ ಮನೆಯನ್ನು ಬಾಡಿಗೆಯಿಲ್ಲದೆ ಉಳಿದುಕೊಳ್ಳಲು ಅಪ್ಪನಿಗೆ ಹೇಳಿ ಬಿಡಿಸಿಕೊಟ್ಟಿದ್ದೆ. ಆ ಕೃತಜ್ಞತೆಯನ್ನು ಈಗಲೂ ಇಟ್ಟುಕೊಂಡಿದ್ದಾನೆ. ಆಂಧ್ರ ಕೇಡರ್ ಐಪಿಎಸ್ ಆಫೀಸರ್ ಆಗಿ ಒಳ್ಳೆಯ ಖಡಕ್ ಆಫೀಸರ್ ಎಂದು ಹೆಸರು ತೆಗೆದುಕೊಂಡಿದ್ದಾನೆ. ಇದುವರೆಗಿನ ತನ್ನ ಇಪ್ಪತ್ತೆಂಟು ವರ್ಷಗಳ ಸರ್ವೀಸಿನಲ್ಲಿ ಮೂವತ್ತೆರಡು ಟ್ರಾನ್ಸ್‌ಫರ್‌ಗಳನ್ನು ಕಂಡವನು. ಒಮ್ಮೆ ಶ್ರೀಕಾಕುಳಂ ಜಿಲ್ಲೆಯಲ್ಲಿ ಯಾವುದೋ ಘಟನೆಗೆ ಸಂಬಂಧಿಸಿದಂತೆ ಒಂದೇ ದಿನ ಆಡಳಿತ ಪಕ್ಷದ ನಾಲ್ಕು ಜನ ಎಂಎಲ್‌ಎಗಳನ್ನು ಅರೆಸ್ಟ್ ಮಾಡಿದ್ದವನು. ಅವನಿಗೆ ಅವನ ಕೈಕೆಳಗಿನ ಅಧಿಕಾರಿಗಳು ತುಂಬಾ ಬೆಲೆ ಕೊಡುತ್ತಾರೆ. ಅವನು ಐಜಿಪಿ ಆಗಿ ಜೈಲು ಡಿಪಾರ್ಟ್‌ಮೆಂಟ್‌ಗೆ ಬಂದ ಮೇಲೆ ಆಂಧ್ರಪ್ರದೇಶದ ಎಲ್ಲಾ ಜೈಲುಗಳಿಗೂ ಭೇಟಿ ಕೊಟ್ಟು ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿದ್ದರ ಬಗ್ಗೆ ದಿ ವೀಕ್ ಮ್ಯಾಗ್ಜೆನ್‌ನಲ್ಲಿ ದೊಡ್ಡ ಆರ್ಟಿಕಲ್ ಪಬ್ಲಿಷ್ ಆಗಿತ್ತು. ಅವನು ಬೆಂಗಳೂರಿಗೆ ಬಂದರೆ ನನ್ನನ್ನು ಭೇಟಿ ಮಾಡದೆ ಹೋಗುತ್ತಿರಲಿಲ್ಲ. ನಾನು ಇದುವರೆಗೂ ಅವನಿಂದ ಯಾವ ಸಹಾಯವನ್ನೂ ಪಡೆದಿರಲಿಲ್ಲ. ನೆನೆದವರ ಮನದಲ್ಲಿ ಎಂಬಂತೆ ಅವನಿಂದಲೇ ಫೋನು ಬಂದಿತ್ತು.

''ಏನು ಫೋನು ಮಾಡ್ತೀನಿ ಅಂತ ಹೇಳ್ದೆ, ಸುದ್ದೀನೆ ಇಲ್ಲ. ಬರೋದುನ್ನ ಕ್ಯಾನ್ಸಲ್ ಮಾಡ್ದೇನು..." ಕೇಳಿದ್ದ.

"ನೂರು ವರ್ಷ ಆಯಸ್ಸು ನಿಂಗೆ. ನಿನಗೇನೇ ಫೋನು ಮಾಡೋಣ ಅಂತ ಅಂದ್ಕೊಳ್ಳೊ ಹೊತ್ಗೆ ನೀನೆ ಮಾಡ್ದೆ ನೋಡು. ಬಂಜಾರ ಹಿಲ್ಸಿನ ತಾಜ್ ಡೆಕ್ಕನ್‌ನಲ್ಲಿ ಇದ್ದೀನಿ. ನಿನ್ನಿಂದ ಒಂದು ಉಪಕಾರ ಆಗ್ಬೇಕು. ರಾಜಮಹೇಂದ್ರಿ ಜೈಲಿನಲ್ಲಿ ಪ್ರತಾಪಸಿಂಹರೆಡ್ಡಿ ಅನ್ನೋ ವಿಚಾರಣಾಧೀನ ಕೈದಿ ಇದಾನೆ. ಜೈಲು ಸೂಪರಿಟೆಂಡೆಂಟ್ ಜಾಸ್ತಿ ಟಾರ್ಚರ್ ಕೊಡ್ತಾ ಇದಾರಂತೆ. ನೀನು ಸ್ವಲ್ಪ ಹೇಳಬಹುದಾ. ಪ್ರತಾಪಸಿಂಹರೆಡ್ಡಿ ನನ್ನ ಪರಿಚಯದವರ ಮಗ..." ಮಾಮೂಲಿಯಾಗಿ ಮಾತನಾಡಿದ್ದೆ.

"ಜೈಲಿಗೆ ಬರ್ತೀಯಾ, ವೆಹಿಕಲ್ ಕಳಿಸ್ತೀನಿ..." ನಕ್ಕಿದ್ದ.

"ಯಾಕೆ ನಗ್ತಾ ಇದಿಯಾ? ಎಂಟು ಗಂಟೆಗೆ ನನ್ನ ಫ್ರೆಂಡ್ ವಿಶ್ವನಾಥ ವೇಮುಲಶಾಸ್ತ್ರಿ ಬರ್ತಾ ಇದಾನೆ. ಅವನು ಬಂದ ಮೇಲೆ ಮುಂದಿನ ಪ್ರೋಗ್ರಾಂ ಬಗ್ಗೆ ತಿಳಿಯುತ್ತದೆ. ಸದ್ಯಕ್ಕೆ ಚರ್ಲಪಲ್ಲಿ ನರಸಿಂಹರೆಡ್ಡಿಯವರ ಪಕ್ಕದ ರೂಮಿನಲ್ಲಿ ಇದ್ದೀನಿ..." ಹೇಳಿದ್ದೆ ನಾನು.

"ಇನ್ನು ಮೂರು ಗಂಟೆ ಟೈಮ್ ಇದೆ. ಏಳೂವರೆಗೆಲ್ಲ ನೀನು ತಾಜ್ ಡೆಕ್ಕನ್‌ಗೆ ಹೋಗಬಹುದು..."